# ಮಕ್ಕಳ ಲಿಂಗತ್ವ ಆಯ್ಕೆಗಿರಲಿ ಪೋಷಕರ ಒಪ್ಪಿಗೆ

ಪ್ರಿಯಾಂಕಾ ಆರ್

**ಸರ್ಕಾರಿ ಆಸ್ಪತ್ರೆಯಲ್ಲಿ ತಮ್ಮನ್ನು ನೋಡುವ ದೃಷ್ಟಿಯನ್ನು ಬದಲಿಸುವಂತೆ ಅಲ್ಲಿನ ಸಿಬ್ಬಂದಿಗೆ ಆಪ್ತಸಮಾಲೋಚನೆ ಬೇಕಾಗಿದೆ.**



"ಲಿಂಗತ್ವ ಅಲ್ಪಸಂಖ್ಯಾತರನ್ನು ಕುಟುಂಬಗಳು 'ತಮ್ಮ ಮಕ್ಕಳು' ಎಂದು ಒಪ್ಪುವಂತೆ ಆಗಬೇಕು. ಮಗ ಅತ್ಯಾಚಾರ, ಕೊಲೆ ಮಾಡಿದ್ದರೂ ಒಪ್ಪುವ ಪೋಷಕರು, ತಮ್ಮ ಮಕ್ಕಳ ಲಿಂಗತ್ವ ಆಯ್ಕೆಯನ್ನು ಒಪ್ಪುವುದಿಲ್ಲ. ಈ ವಿರೋಧಾಭಾಸ ಬದಲಾದರೆ, ಲಿಂಗತ್ವ ಅಲ್ಪಸಂಖ್ಯಾತರು ಭಿಕ್ಷೆ ಬೇಡುವ, ಲೈಂಗಿಕ ಕಾರ್ಯಕರ್ತರಾಗುವ ಪ್ರಮೇಯ ಬರುವುದಿಲ್ಲ. ಅವರಿಗೂ ಗೌರವದ ಬದುಕು ಸಹಜವಾಗಿ ಸಿಗುತ್ತದೆ" ಎನ್ನುವ ಪ್ರಿಯಾಂಕಾ ಲಿಂಗ ಪರಿವರ್ತಿತ ಮಹಿಳೆ, ರೇಡಿಯೊ ಜಾಕಿ ಆಗಿ ಗುರ್ತಿಸಿಕೊಂಡವರು.

ರಾಜ್ಯದ ಮೊದಲ ರೇಡಿಯೊ ಜಾಕಿ ಎನ್ನುವ ಅಗ್ಗಳಿಕೆಯ ಪ್ರಿಯಾಂಕಾ, 13 ವರ್ಷಗಳಿಂದ ಈ ಕೆಲಸ ಮಾಡುತ್ತಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಮೀಸಲಾತಿ ಇದೆ ಎನ್ನುವುದಾದರೆ, 'ಎಲ್ಲಿದೆ?' ಎನ್ನುವುದು ಅವರ ಪ್ರಶ್ನೆ. ಇದ್ದರೆ ಅದರ ಉಪಯೋಗ ನಮ್ಮ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ಆಗಿದೆ ಎನ್ನುವ ಅಂಕಿ ಅಂಶವನ್ನು ಕೇಳುತ್ತಾರೆ.

'ತಮ್ಮ ಸಮುದಾಯಕ್ಕೆ ಮೀಸಲಾತಿ ಕೊಟ್ಟಿದ್ದರೆ ಅದರ ಪ್ರಯೋಜನ ಫಲಾನುಭವಿಗಳಿಗೆ ಸ್ಪಷ್ಟವಾಗಬೇಕು. ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಉದ್ಯೋಗದಲ್ಲಿಯೂ ಮೀಸಲಾತಿ ವಿಸ್ತರಿಸಬೇಕು. ಶಿಕ್ಷಣದಿಂದ ವಂಚಿತರಾಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಸೌಲಭ್ಯ ಎನ್ನುವುದು ಮೂಗಿಗೆ ತುಪ್ಪ ಸವರಿದಂತೆ ಆಗಬಾರದು. ಈ ದೇಶದ ಪತ್ರಿಯೊಬ್ಬ ನಾಗರಿಕನಿಗೆ ಇರುವಷ್ಟೇ ಹಕ್ಕು ನಮಗೂ ಇದೆ. ಒಬ್ಬ ವ್ಯಕ್ತಿ ಒಂದು ಮತ. ಅದೇ ಕಾರಣಕ್ಕೆ ಚುನಾವಣೆ ಪೂರ್ವದಲ್ಲಿ ನಮ್ಮ ಮತಕ್ಕೆ ಸಮಾನ ಮೌಲ್ಯ. ನಂತರ ಏಕೆ ನಮ್ಮನ್ನು ಅಪಮೌಲ್ಯಕ್ಕೆ ಈಡುಮಾಡುತ್ತಿದ್ದಾರೆ ಎನ್ನುವುದು ಅರ್ಥವಾಗದೆ ಉಳಿದ ರಹಸ್ಯ' ಎನ್ನುವ ನೋವು ಅವರದು.

'ಸರ್ಕಾರ ಯೋಜನೆಗಳನ್ನು ವೈಜ್ಞಾನಿಕವಾಗಿ ರೂಪಿಸಬೇಕು. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದಲ್ಲಿ ಎಷ್ಟು ಜನ ಇದ್ದಾರೆ. ಅವರಲ್ಲಿ ಲಿಂಗ ಪರಿವರ್ತಿತರ ಪ್ರಮಾಣ ಎಷ್ಟು ಎನ್ನುವ ಅಂಕಿಅಂಶವನ್ನು ಗ್ರಹಿಸಬೇಕು. ಈ ಸಮುದಾಯವನ್ನೂ ವಲಸೆ ಸಮಸ್ಯೆ ಬಾಧಿಸುತ್ತಿದೆ. ಬೇರೆ ಬೇರೆ ರಾಜ್ಯಗಳಿಂದಲೂ ವಲಸೆ ಬಂದಿದ್ದಾರೆ. ಈ ಬಗ್ಗೆ ಕೂಡ ಯೋಚಿಸಬೇಕು. ಯಾರಿಗೆ ಯಾವ ಕೆಲಸ ನಿರ್ವಹಿಸುವ ಅರ್ಹತೆ ಇರುತ್ತದೆಯೋ ಅವರಿಗೆ ಅದನ್ನು ನೀಡುವ ಕೆಲಸವನ್ನು ಸರ್ಕಾರ ಮಾಡಬೇಕು. ಖಾಸಗಿ ಕ್ಷೇತ್ರವೋ, ಸರ್ಕಾರಿ ಕೆಲಸವೋ, ಜೀವನ ನಿರ್ವಹಣೆಗೆ ಒಂದು ಉದ್ಯೋಗ ಬೇಕು. ಭಿಕ್ಷೆ ಬೇಡುವ, ಲೈಂಗಿಕ ವೃತ್ತಿ ಮಾಡುವ ಅಪೇಕ್ಷೆ ಯಾರಿಗೂ ಇರುವುದಿಲ್ಲ. ಎಲ್ಲರಿಗೂ ಗೌರವದ ಬಾಳ್ವೆಯ ಬಯಕೆ ಇರುತ್ತದೆ. ಯಾರ ಹಂಗೂ ಬಯಸದ ಕೆಲವರು ಸ್ವಯಂ ಉದ್ಯೋಗ ಮಾಡುತ್ತಿದ್ದಾರೆ. ಅಂತಹವರನ್ನು ಉತ್ತೇಜಿಸಲು ಸರ್ಕಾರ ಕಾರ್ಯಯೋಜನೆ ಹಾಕಿಕೊಳ್ಳಬೇಕು. ನಮ್ಮ ಬಹುಮುಖ್ಯ ಸಮಸ್ಯೆ, ವಿಳಾಸ ದೃಢೀಕರಣ. ವಿಳಾಸಕ್ಕೆ ಅಗತ್ಯ ದಾಖಲೆ ಇರುವುದಿಲ್ಲ. ಕೆಲವು ಕುಟುಂಬಗಳಲ್ಲಿ ಟ್ರಾನ್ಸ್‌ಜೆಂಡರ್ ಒಪ್ಪುತ್ತಾರೆ. ಕೆಲವರು ವಿರೋಧಿಸುತ್ತಾರೆ. ಆಗ ಊರಿಂದೂರಿಗೆ ಬರುವುದು ಅನಿವಾರ್ಯ' ಎನ್ನುವುದು ಪ್ರಿಯಾಂಕಾ ಅವರ ಅಭಿಮತ.

ಶಾಲಾ ದಾಖಲಾತಿ ಪ್ರಕಾರ ಪ್ರಿಯಾಂಕಾ ಅವರ ಹೆಸರು ರಾಜು. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಸೇರಿದಾಗ ಅವರಿಗೆ 14 ವರ್ಷ. ಅವರ ಬಳಿ ಗುರುತಿನ ಚೀಟಿ ಇರಲಿಲ್ಲ. ಸರ್ಜರಿ ನಂತರ ಅವರ ಐಡೆಂಟಿಟಿಯನ್ನು ಅವರೇ ಮಾಡಿಕೊಂಡಿದ್ದಾರೆ. ಅದಕ್ಕವರು ನೀಡುವ ಸಲಹೆ: 'ಹೆಸರನ್ನು ಬದಲಿಸಿಕೊಳ್ಳಿ. ಅಫಿಡವಿಟ್ ಮಾಡಿಸಿ, ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಿ. ಅದರ ಆಧಾರದ ಮೇಲೆ ಸರ್ಕಾರಿ ಗುರುತಿನ ಪತ್ರ ಪಡೆಯಬಹುದು'.

ಮನೆಯಿಂದ ಹೊರ ಬಂದಾಗ ರಾಜು ತುಂಬ ಕಷ್ಟಪಟ್ಟಿದ್ದಾರೆ. ಈಗವರು 37 ವರ್ಷದ ಮಹಿಳೆ. ನಿರಂತರ ಹೋರಾಟದಿಂದ ಅವರು ಬದುಕು ಕಟ್ಟಿಕೊಂಡಿದ್ದಾರೆ. ಕುಟುಂಬ–ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಅವರು, ಆಶ್ರಯಕ್ಕಾಗಿ ಸಮುದಾಯದ ಜನರನ್ನು ಹುಡುಕಿಕೊಂಡು ಅಲೆದಿದ್ದಾರೆ. ಈಗ ಅವರಿಗೊಂದು ಐಡೆಂಟಿಟಿ ಸಿಕ್ಕಿದೆ. ಬೆಂಗಳೂರಿನ ಚಾಮರಾಜ ಪೇಟೆಯಲ್ಲಿ ಹುಟ್ಟಿ ಬೆಳೆದ ಅವರು 9ನೇ ತರಗತಿವರೆಗೆ ಓದಿದ್ದಾರೆ. ತಮ್ಮ ಕೌಶಲ್ಯ ಮತ್ತು ಸಾಮರ್ಥ್ಯದ ಮೇಲೆ ಉದ್ಯೋಗ ನಿರ್ವಹಿಸುತ್ತಿದ್ದಾರೆ.

'ಸರ್ಕಾರಿ ಮಾಸಾಶನ ಯೋಜನೆಯಡಿ 800 ರೂಪಾಯಿ ಕೊಟ್ಟರೆ, ಅದರಿಂದ ಏನು ಮಾಡಲು ಸಾಧ್ಯ? ವಯಸ್ಸಾದವರೂ, ಕಾಯಿಲೆಯಿಂದ ಬಳಲುವವರೂ ಇದ್ದಾರೆ. ಅವರಿಗೆ ಒಂದು ದಿನದ ಮಾತ್ರೆ–ಊಟದ ಖರ್ಚಿಗೂ ಮಾಸಾಶನ ಸಾಕಾಗುವುದಿಲ್ಲ. ಕನಿಷ್ಠ ಜೀವನಕ್ಕೆ ನೆರವು ಸಿಗಲೇಬೇಕು. ಸರ್ಕಾರಿ ಆಸ್ಪತ್ರೆಯಲ್ಲಿ ತಮ್ಮನ್ನು ನೋಡುವ ದೃಷ್ಟಿಯನ್ನು ಬದಲಿಸುವಂತೆ ಅಲ್ಲಿನ ಸಿಬ್ಬಂದಿಗೆ ಆಪ್ತಸಮಾಲೋಚನೆ ಬೇಕಾಗಿದೆ. ಶಿಕ್ಷಣದಲ್ಲಿ ಕೊಟ್ಟ ಮೀಸಲಾತಿ ಇನ್ನೂ ಬಳಕೆಯಾಗುತ್ತಿಲ್ಲ ಅಂದರೆ, ನಮ್ಮ ಪರಿಸ್ಥಿತಿ ಎಂತಹ ಶೋಚನೀಯ ಸ್ಥಿತಿಯಲ್ಲಿದೆ ಎನ್ನುವುದನ್ನು ಅಂದಾಜು ಮಾಡಬಹುದು' ಎನ್ನುತ್ತಾರೆ.

'ಅವಸರದ ಕಾರ್ಯಕ್ರಮಗಳಿಂದ ಪ್ರಯೋಜನ ಇಲ್ಲ. ಸರ್ಕಾರಿ ಕಚೇರಿಗಳಲ್ಲಿ ಕೆಲವರು, 'ಕೆಳಗಡೆ ಏನಿದೆ? ಮೇಲೇನಿದೆ? ಹೇಗೆ ಬಂದ್ರಿ?' ಎಂದು ಚುಚ್ಚಿ ಪ್ರಶ್ನಿಸುತ್ತಾರೆ. ಸರ್ಕಾರಿ ಅಧಿಕಾರ ವರ್ಗದಲ್ಲಿ ಸಾಮಾನ್ಯ ತಿಳಿವಳಿಕೆಯೂ ಇಲ್ಲ. ಹೀಗಿರುವಾಗ ಮೀಸಲಾತಿ ಎನ್ನುವ ಗಗನಕುಸುಮ ತಮ್ಮ ಮುಡಿಗೆ ಏರುವುದಾದರೂ ಹೇಗೆ?'. ಪ್ರಿಯಾಂಕಾ ಅವರ ಪ್ರಶ್ನೆಗೆ ಉತ್ತರಿಸುವವರು ಯಾರು?

ಪ್ರತಿಕ್ರಿಯಿಸಿ: feedback@sudha.co.in